# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 373 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13-08-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಮುಖ್ಯರಸ್ತೆ ಮತ್ತು ಲೋಕೋಪಯೋಗಿ ರಸ್ತೆಗಳ ಬದಿಯಲ್ಲಿ ಬಫರ್ ವಲಯವನ್ನು ಸುರಕ್ಷಿತ ರೀತಿಯಲ್ಲಿ ನಿರ್ವಹಿಸಲು ಸರಕಾರದ ಕ್ರಮಗಳೇನು: | ಸರ್ಕಾರದ ಸುತ್ತೋಲೆ ಸಂಖ್ಯೆ:ಲೋಇ 466 ಸಿಆರ್ ಎಂ 2022 (ಇ) ಬೆಂಗಳೂರು, ದಿನಾಂಕ:30.06.2022 ರ ಪ್ರಕಾರ ರಾಜ್ಯದ ಜಿಲ್ಲಾ ಮುಖ್ಯ ರಸ್ತೆ ಮತ್ತು ಲೋಕೋಪಯೋಗಿ ರಸ್ತೆಗಳ ಬದಿಯಲ್ಲಿ ಬಫರ್ ವಲಯವನ್ನು ಸುರಕ್ಷಿತ ರೀತಿಯಲ್ಲಿ ನಿರ್ವಹಿಸಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |
| ಆ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಸ್ತೆ ಬದಿಯ ಅಪಾಯಕಾರಿ ಮರ ಮತ್ತು ಕಟ್ಟಡ ತೆರವುಗೊಳಿಸುವಿಕೆ, ರಸ್ತೆ ಅಂಚಿನ ನಿರ್ವಹಣೆ, ಚರಂಡಿ ನಿರ್ವಹಣೆ ವಾರ್ಷಿಕವಾಗಿ ಮಾಡಲಾಗುತ್ತಿದೆಯೇ: (ವಿವರ ಒದಗಿಸುವುದು) | ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಾಯಕಾರಿ ಮರ, ರಸ್ತೆ ಅಂಚಿನ ನಿರ್ವಹಣೆ, ಚರಂಡಿ ನಿರ್ವಹಣೆ ಕಾಮಗಾರಿಗಳನ್ನು Short Term Maintenance Contract (STMC) ಯೋಜನೆಯಡಿಯಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯ ಅನುದಾನದಲ್ಲಿ ನಿರ್ವಹಿಸಲಾಗುತ್ತಿದ್ದು, ರಸ್ತೆಯನ್ನು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.<br><br>ರಾಜ್ಯ ಹೆದ್ದಾರಿಗಳನ್ನು ಲೆಕ್ಕಶೀರ್ಷಿಕೆ 3054-03-337-0-05-200 ಅಡಿಯಲ್ಲಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಲೆಕ್ಕಶೀರ್ಷಿಕೆ 3054-04-337-1-10-200 ಅಡಿಯಲ್ಲಿ ಬಿಡುಗಡೆಯಾಗುವ ಅನುದಾನಕ್ಕನುಗುಣವಾಗಿ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಂಚಿನ ನಿರ್ವಹಣೆ, ಚರಂಡಿ ನಿರ್ವಹಣೆಯನ್ನು ವಾರ್ಷಿಕವಾಗಿ ಮಾಡಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿ ಬರುವ ಅಪಾಯಕಾರಿ ಮರಗಳ/ಕಟ್ಟಡಗಳ ತೆರವು ಇತ್ಯಾದಿಗಳನ್ನು ಇಲಾಖಾ ನಿಯಮಾವಳಿಯಂತೆ ಸಂಬಂಧಪಟ್ಟ ಇತರ ಇಲಾಖೆಯ ಸಹಯೋಗದೊಂದಿಗೆ ಕ್ರಮಕೈಗೊಳ್ಳಲಾಗುತ್ತಿದೆ. |
| ಇ | ಜಿಲ್ಲಾ ಮುಖ್ಯ ರಸ್ತೆ ಮತ್ತು ಲೋಕೋಪಯೋಗಿ ರಸ್ತೆಗಳ ಅಂಚಿನಲ್ಲಿ ವಿದ್ಯುತ್ ಕಂಬಗಳು ಇದ್ದು ಹಲವಾರು ಅಪಘಾತಗಳಿಗೆ ಕಾರಣವಾಗಿರುವುದರಿಂದ ಅವನ್ನು ಸ್ಥಳಾಂತರಿಸಲಾಗಿದೆಯೇ: ಈ ಕುರಿತು ಯಾವಾಗ ಕ್ರಮವಹಿಸಲಾಗುವುದು: | ಜಿಲ್ಲಾ ಮುಖ್ಯ ರಸ್ತೆ ಮತ್ತು ಲೋಕೋಪಯೋಗಿ ರಸ್ತೆಗಳ ಅಂಚಿನಲ್ಲಿ ವಿದ್ಯುತ್ ಕಂಬಗಳು ಇದ್ದು, ಮೂಲ ಅಂದಾಜು ಪತ್ರಿಕೆ ತಯಾರಿಸುವ ಹಂತದಲ್ಲಿಯೇ ವಿದ್ಯುತ್ ಕಂಬಗಳ ಸ್ಥಳಾಂತರಕ್ಕೆ ಪ್ರತ್ಯೇಕವಾಗಿ ಉಪ-ಅಂದಾಜು ಪತ್ರಿಕೆಯನ್ನು ವಿದ್ಯುತ್ ಸರಬರಾಜು ಕಂಪನಿಯವರಿಂದ (ESCOM) ಪಡೆದುಕೊಂಡು, ಮೂಲ ಅಂದಾಜು ಪತ್ರಿಕೆಯಲ್ಲಿ ಅಳವಡಿಸಿ, ಟೆಂಡರ್ ಕರೆದು, ಅವುಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಈ | ಜಿಲ್ಲಾ ಮುಖ್ಯ ರಸ್ತೆ ಮತ್ತು ಲೋಕೋಪಯೋಗಿ ರಸ್ತೆಗಳ ಬದಿಯಲ್ಲಿ ಚರಂಡಿ ನಿರ್ಮಾಣ ಹೊಣೆ ಯಾರದು: ಚರಂಡಿಯಿಲ್ಲದೆ ಮಳೆ ನೀರು ರಸ್ತೆಯ ಮೇಲೆ ಹರಿದು ರಸ್ತೆ ಹಾಳಾಗುತ್ತಿರುವ ಕುರಿತು ಇಲಾಖೆಯ ಕ್ರಮಗಳೇನು: | ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಚರಂಡಿ ನಿರ್ಮಾಣದ ಹೊಣೆ ಲೋಕೋಪಯೋಗಿ ಇಲಾಖೆಯದ್ದಾಗಿರುತ್ತದೆ. ಗ್ರಾಮ ಮತ್ತು ನಗರಗಳ ಪರಿಮಿತಿಯಲ್ಲಿ ಮಾತ್ರ RCC ಚರಂಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಇನ್ನುಳಿದ ಬಾಕಿ ರಸ್ತೆಯ ಉದ್ದಕ್ಕೆ ಕಚ್ಚಾ ಚರಂಡಿ (Open Drain) ನಿರ್ಮಿಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮವಹಿಸಲಾಗುತ್ತಿದೆ. |
| ಉ | ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸುಮಾರು 3,000–5,000 ಮಿಲಿ ಮೀಟರ್ ಮಳೆ ಬರುತ್ತಿದ್ದು ಇಲ್ಲಿಯ ರಸ್ತೆಗಳು ಚರಂಡಿ ರಚನೆ ಮತ್ತು ನಿರ್ವಹಣೆ ಕುರಿತು ಸರಕಾರದ ಕ್ರಮಗಳೇನು: ಹೆಚ್ಚುವರಿ ನಿರ್ವಹಣಾ ಮೊತ್ತಕ್ಕೆ ಬೇಡಿಕೆ ಸಲ್ಲಿಸಲಾಗಿದೆಯೇ? | ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಚರಂಡಿಗಳನ್ನು ಐ.ಆರ್.ಸಿ. ನಿಯಮಾವಳಿಯನ್ವಯ ನಿರ್ಮಾಣ ಮಾಡಲಾಗುತ್ತಿರುತ್ತದೆ. ರಸ್ತೆ ಮತ್ತು ಚರಂಡಿಗಳನ್ನು Short Term Maintenance Contract (STMC) & Project Based Maintenance Contract (PBMC) ಯೋಜನೆಯ ಅಡಿಯಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯದ ಅನುದಾನದಿಂದ ನಿರಂತರವಾಗಿ ನಿರ್ವಹಣೆ ಮಾಡಲಾಗುತ್ತಿರುತ್ತದೆ. 2024–25ನೇ ಸಾಲಿಗೆ ಒಟ್ಟು ರೂ.10.78 ಕೋಟಿ ಮಂಜೂರಾಗಿದ್ದು, ಸದರಿ ಮೊತ್ತದಲ್ಲಿ 102.07 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗಾಗಿ ಪ್ರಸಕ್ತ 2025–26 ನೇ ಸಾಲಿಗೆ ರಾಜ್ಯ ಹೆದ್ದಾರಿ ರಸ್ತೆಗಳಿಗೆ ಲೆಕ್ಕಶೀರ್ಷಿಕೆ 3054–03–337–0–05–200 ಅಡಿಯಲ್ಲಿ ರೂ.1341.01 ಲಕ್ಷ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಿಗೆ ಲೆಕ್ಕಶೀರ್ಷಿಕೆ 3054–04–337–1–10–200 ಅಡಿಯಲ್ಲಿ ರೂ.912.87 ಲಕ್ಷ (ಮುಂದುವರೆದ ಕಾಮಗಾರಿಗಳಿಗೆ ಸೇರಿ) ಅನುದಾನ ಬಿಡುಗಡೆಗೊಂಡಿದ್ದು, ಬಿಡುಗಡೆಯಾಗಿರುವ ಅನುದಾನಕ್ಕನುಗುಣವಾಗಿ ರಸ್ತೆಗಳ ಮತ್ತು ರಸ್ತೆಬದಿಯಲ್ಲಿ ಬರುವ ಚರಂಡಿಗಳ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಕಡತ ಸಂಖ್ಯೆ: ಲೋಇ 65 ಸಿಬಿಆರ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು